**ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್-76ರಲ್ಲಿ ದಿನಾಂಕ: 20-03-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ**

***ಸಭಾ ನಡವಳಿಗಳು.***

**ವಾರ್ಡ್ ಸಂಖ್ಯೆ-76 ಗಾಯತ್ರಿನಗರ** **ಸಮಯ ಬೆಳಿಗ್ಗೆ 11:00 ಘಂಟೆಗೆ**

ದಿನಾಂಕ: 20-03-2021 ರಂದು ವಾರ್ಡ್ ಸಂಖ್ಯೆ: 76ರ ಮಾರ್ಚ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-76ಗಾಯತ್ರಿನಗರ |
| 2 | ಶ್ರೀ ಚಿಕ್ಕಗೂಳಿಗೌಡ.ಜೆ.ಜಿ, ಸಹಾಯಕ ಅಭಿಯಂತರರು, ವಾರ್ಡ್-76ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 4 | ಶ್ರೀಮತಿ ಶಾರದಾ ಬಾಯಿ, |
| | ಶ್ರೀ ಬಿ.ಜಿ ಕೃಷ್ಣಮೂರ್ತಿ, ಪಿ.ಎಸ್.ಐ |
| 5 | ಶ್ರೀ ಕೆ ಗೋವಿಂದರಾಜು, ಸ್ಯಾನಿಟರಿ ದಫೇದರ್, ಬಿಬಿಎಂಪಿ |
| 6 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 7 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 8 | ಶ್ರೀ ಪಿ.ವೆಂಕಟೇಶ್, ಎಲೆಕ್ಟ್ರೀಕಲ್ ಗುತ್ತಿಗೆದಾರರು |
| 9 | ಶ್ರೀ ಮಂಜುನಾಥ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಶ್ರೀಮತಿ ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 11 | ಶ್ರೀ ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 12 | ಶ್ರೀ ಪ್ರದೀಪ್, ಮೇಲ್ವಿಚಾರಕರು |
| 13 | ಶ್ರೀ ರಂಗನಾಥ್, ಬೆಸ್ಕಾಂ, ಜೆ.ಇ |
| 14 | ಶ್ರೀ ಸಿದ್ದರಾಜು, ಬಿ.ಡಬ್ಲ್ಯೂಎಸ್‌ಎಸ್‌ಬಿ |
| 15 | ಶ್ರೀ ಕೊಂಡಯ್ಯ, ಆರೋಗ್ಯ ಪರಿವೀಕ್ಷಕರು |
| 16 | ಶ್ರೀ ಹರೀಶ್, ಮಾರ್ಷಲ್ |
| 17 | ಶ್ರೀ ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |

Scanned with CamScanner

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್-76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಆರೋಗ್ಯ ಇಲಾಖೆ:**

- ನೋಡಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿಗಳಿಗೆ ಕೋರೊನಾ ಜಾಸ್ತಿಯಾಗುತ್ತಿದ್ದು, ಏನು ಕ್ರಮಕೈಗೊಳ್ಳಲಾಗಿದೆ ಎಂದು ಕೇಳಿದರು. ಆರೋಗ್ಯ ಅಧಿಕಾರಿಗಳು ಕೋರೊನಾ ಟೆಸ್ಟ್‌ಗಳನ್ನು ಜಾಸ್ತಿ ಮಾಡಲಾಗುತ್ತಿದೆ. ಎಂದು ತಿಳಿಸಿದರು. ಸ್ಯಾನಿಟೈಸಸ್ ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. ಮತ್ತು ಸೂಪರ್‌ಸ್ಪೆಡರ್‌ಗಳಿಗೆ 15 ದಿನಕೊಮ್ಮೆ ಟೆಸ್ಟ್ ಮಾಡುವಂತೆ ಸೂಚಿಸಲಾಯಿತು. ಹೋಮ್ ಐಸೋಲೇಷನ್ ಸರಿಯಾಗಿ ನಡೆಸಲಾಗುತ್ತಿದೆಯೆ ಎಂದು ಕೇಳಿದರು. ಹೋಮ್ ಐಸೋಲೇಷನ್ ನಡೆಯುತ್ತಿದ್ದು, ಬಿ.ಎಲ್.ಓ ಗಳು 10 ಜನ ಹಾಗೂ 11 ಜನ ಆಧ್ಯಾಪಕರಿದ್ದು, ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿದರು. ವ್ಯಾಕ್ಸಿನೇಷನ್‌ನ್ನು 720 ಜನಗಳಿಗೆ ನೀಡಲಾಗಿದ್ದು, ವ್ಯಾಕ್ಸಿನ್‌ನ್ನು ನೀಡುವ ಕಾರ್ಯ ಮುಂದುವರೆದು ಎಂದು ಸಭೆಯಲ್ಲಿ ತಿಳಿಸಿದರು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ರಾಜಕಾಲುವೆಯ ಕಾಮಗಾರಿಗಳು ನಡೆಯುತ್ತಿದ್ದು, ಮಳೆ ಬಂದರೆ ತೊಂದರೆಯಾಗುವುದೆಂದು ಆದಷ್ಟು ಬೇಗ ಕಾಮಗಾರಿಯನ್ನು ಮುಗಿಸುವಂತೆ ಕ್ರಮಕೈಗೊಳ್ಳಲು ಸಭೆಯಲ್ಲಿ ತಿಳಿಸಲಾಯಿತು.

**ಕಂದಾಯ ಇಲಾಖೆ**

- ಕಂದಾಯ ಪಾವತಿಸಿದರು ಕಂದಾಯ ಪಾವತಿಸುತ್ತಿದ್ದು, ಕಂದಾಯ ಪಾವತಿಸದವರಿಗೆ ನೋಟಿಸ್ ಜಾರಿ ಮಾಡಿ ಅತ್ಯಂತ ಜರೂರಾಗಿ ಕಂದಾಯ ವಸೂಲಿ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಪೊಲೀಸ್ ಇಲಾಖೆ**

- ಸಭೆಯಲ್ಲಿ ಹಾಜರಿದ್ದ, ಪೊಲೀಸ್ ಅಧಿಕಾರಿಗಳಿಗೆ 10ನೇ ಎ ಮುಖ್ಯರಸ್ತೆ, ರಸ್ತೆಯ ಕನ್‌ಸರ್ವೆನ್ಸಿಯಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದು, ಹಾಗೂ ಸವಿ ಸಾಗರ್ ಹೋಟೆಲ್‌ನ ಪಕ್ಕ ಹುಡುಗರು ಗಾಂಜಾ ಸೇವನೆ ಮಾಡುತ್ತಿದ್ದು, ರೌಂಡ್ಸ್ ಜಾಸ್ತಿ ಮಾಡಿ ಗಾಂಜಾ ಸೇವನೆ ಮಾಡುವವರ ವಿರುದ್ಧ ಕ್ರಮಕೈಗೊಳ್ಳಲು ಸಭೆಯಲ್ಲಿ ತಿಳಿಸಲಾಯಿತು.

Scanned with CamScanner

**ಮಾಸ್ಕ್:**

- ವಾರ್ಡ್ ಮಾಸ್ಕ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ರೈಲ್ವೆ ಪ್ಯಾರಲೆಲ್ ರಸ್ತೆಯಲ್ಲಿ, ಕಸ ಹಾಗೂ ಕೋಳಿ ಕಸವನ್ನು ತಂದು ಹಾಕುತ್ತಿದ್ದು, ಸದರಿಯವರಿಗೆ ದಂಡ ವಿಧಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ಬೆಸ್ಕಾಂ:**

- ಬೆಸ್ಕಾಂ ಅಧಿಕಾರಿಗಳು ಯಾವುದೇ ದೂರುಗಳಿಲ್ಲವೆಂದು ತಿಳಿಸಿದರು ಬೆಸ್ಕಾಂ, ಅಧಿಕಾರಿಗಳು ರಸ್ತೆಗಳನ್ನು ಅಗೆಯುತ್ತಿದ್ದು, ರಸ್ತೆಗಳನ್ನು ಅಗೆದ ನಂತರ ರಿಟೋರೇಷನ್ ಮಾಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

**ವಾರ್ಡ್ ಕಮಿಟಿ ಮೀಟಿಂಗ್‌ಗೆ ಗೈರುಹಾಜರಾದವರಿಗೆ (SWM, BESCOM, BWSSB, STREET LIGHT, POLICE) ಇಲಾಖೆಗಳಿಗೆ ಸಭೆಗೆ ಹಾಜರಾಗುವಂತೆ ಸಭೆಯಲ್ಲಿ ಸೂಚಿಸಲಾಯಿತು.**

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಕಾರ್ಯದರ್ಶಿ,**
ಸಹಾಯಕ ಅಭಿಯಂತರರು, ವಾರ್ಡ್-76
ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

**ಅಧ್ಯಕ್ಷರು**
ನೋಡಲ್ ಅಧಿಕಾರಿಗಳು, ವಾರ್ಡ್-76
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner